O.S.No.206/2020
PW -5

ದಿನಾಂಕ 06/11/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಡಿ.ವಿ.ಎಸ್. 2 ನೇ ಪ್ರತಿವಾದಿ ಪರ ವಕೀಲರಿಂದ**

ನಾನು 10 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಮ್ಮ ವಕೀಲರು ಹೇಳಿ ಬರೆಸಿರುತ್ತಾರೆ. ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೆ ನಂ- 40/4 ಇದ್ದು ಅದರ ವಿಸ್ತೀರ್ಣ 1 ಎಕರೆ 14 ಗುಂಟೆ ಇರುತ್ತದೆ. ದಾವಾ ಆಸ್ತಿ ಅದರ ಚಕ್ಕುಬಂದಿ ಪೂ-ಮಲ್ಲಯ ರವರ ಜಮೀನು, ಪ-ಕರೆರಂಗಪ್ಪ ರವರ ಜಮೀನು, ಉ-ಹನುಮಕ್ಕನ ನಿವೇಶನ ಮತ್ತು ಗ್ರಾಮಠಾಣಾ ಮತ್ತು ದ-ಮಲ್ಲಯ್ಯನ ಜಮೀನು ಇರುತ್ತದೆ.

2. ದಾವಾ ಆಸ್ತಿ ಮೊದಲಿಗೆ ಬಸವರೆಡ್ಡಿ ರವರಿಗೆ ಸೇರಿತ್ತು ಸದರಿಯವರಿಗೆ ಸೇರಿದ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ಬಸವರೆಡ್ಡಿ ರವರು 23 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದರು. ಸದರಿಯವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಬಸವರೆಡ್ಡಿ ರವರು ನಮ್ಮ ಊರಿನಲ್ಲಿ ವಾಸ ಇದ್ದರು. ಬಸವರೆಡ್ಡಿ ಮತ್ತು ವೆಂಕಟರಮಣಪ್ಪ ಅಣ್ಣ ತಮ್ಮಂದಿರ ಮಕ್ಕಳು ಇರುತ್ತಾರೆ. ರಾಮಯ್ಯ, ತಿಮ್ಮಯ್ಯ ಮತ್ತು ವೆಂಕಟಪ್ಪ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದರು. ದಾವಾ ಆಸ್ತಿಯ ಪಹಣಿಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕ ನನಗೆ ಸೇರಿದ ಜಮೀನು ಇರುವುದಿಲ್ಲ. ನಾನು ಕೃಷ್ಣಯ್ಯಶೆಟ್ಟಿ ರವರನ್ನು ನೋಡಿರುವುದಿಲ್ಲ. ಕೃಷ್ಣಯ್ಯಶೆಟ್ಟಿ ತಮ್ಮ ಹೆಂಡತಿ ಸಹಾಯದಿಂದ ಮೋಸ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಕೃಷ್ಣಯ್ಯಶೆಟ್ಟಿ ರವರಿಗೆ ಸೇರಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಆದರೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆಂದು ಉತ್ತರಿಸಿರುತ್ತಾರೆ

3. ಕೃಷ್ಣಯ್ಯಶೆಟ್ಟಿ ಮೃತಪಟ್ಟ ನಂತರ ಆತನ ಹೆಂಡತಿ ರತ್ನಮ್ಮ ಪ್ರತಿವಾದಿಗಳಿಗೆ ಆತನ ಹೆಂಡತಿ ರತ್ನಮ್ಮ ಇವರು ಪ್ರತಿವಾದಿ ತಂದೆಗೆ ದಿ.24/09/1990 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಆದಾಗಿನಿಂದಲೂ ಸದರಿ ಆಸ್ತಿ ಪ್ರತಿವಾದಿ ತಂದೆ ಹೆಸರಿನಲ್ಲಿದ್ದು ತದ ನಂತರ ಪ್ರತಿವಾದಿ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮೂಲ ದಾವೆ ಸಂಖ್ಯೆ12/2017 ರಲ್ಲಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗದಂತೆ ಅವರವ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ಇತ್ತೀಚೆಗೆ ಮಾಡಿಕೊಂಡಿರಬಹುದು ಎಂದು ಉತ್ತರಿಸಿರುತ್ತಾರೆ.

4. 2016 ನೇ ಸಾಲಿನಲ್ಲಿ ಪ್ರತಿವಾದಿ ತನ್ನ ಭಾಗದ ಆಸ್ತಿಯಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಬೋರ್ ವೆಲ್ ತೆಗೆಸಿ ಸರ್ವೆ ನಂ-40/4 ರಲ್ಲಿ ಬೆಳೆ ಇಡುತ್ತಾರೆ ಎಂದರೆ ಸರಿ. ವೆಂಕಟಪ್ಪನ ಮನೆಯ ಉತ್ತರ ಇರುವ ಜಾಗ ಹನುಮಕ್ಕನಿಗೆ ಸೇರಿರುತ್ತದೆ. ಸದರಿ ಜಾಗ 60 ಇಂಟು 20 ಇರುತ್ತದೆ. ಸದರಿ ಆಸ್ತಿ ಹನುಮಕ್ಕನಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿ ಮೊದಲಿನಿಂದ ಅನುಭವಿಸುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಸರ್ಕಾರದವರು ಹನುಮಕ್ಕನಿಗೆ ಯಾವಾಗ ಕೊಟ್ಟಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಹನುಮಕ್ಕನಿಗೆ ಯಾವುದೇ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಹನುಮಕ್ಕ ರವರು ಪ್ರತಿವಾದಿ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 2016 ನೇ ಸಾಲಿನಲ್ಲಿ ಮನೆ ಕಟ್ಟಿಕೊಂಡು ವಾಸ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗಳಿಗೆ ಆಗಲೀ ಅವರ ಕುಟುಂಬದವರಿಗೆ ಆಗಲೀ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

5. ನನಗೂ ಮತ್ತು ಪ್ರತಿವಾದಿಗೂ ಮೊದಲಿನಿಂದಲೂ ದ್ವೇಷ ಇರುವ ಕಾರಣ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆ ವಿಚಾರ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ